

# ಮಕ್ಕಳಿಗೆ ಬರಲಿರುವ ಅಪಾಯಗಳು

## ಉಚ್ಚರಿಸಿದ ಪ್ರವಾದನೆ

ಕರ್ತನ ಸೇವಕರ ಜೊತೆ ನಾನು ಕರ್ತನ ಮಾತಿಗಾಗಿ ಕಾದಿರುವಾಗ ಕರ್ತನು ಮಾತನಾಡಿ: ಚಿಕ್ಕಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ. ಚಿಕ್ಕಮಕ್ಕಳಿಗೆ ಸ್ಥಳ ಕೊಡಿರಿ. ನಾನು ಚಿಕ್ಕಮಕ್ಕಳ ಮೇಲೆ ನನ್ನ ಶಕ್ತಿಯನ್ನು ಅವರ ತುಟಿಗಳಲ್ಲಿ ನನ್ನ ಬಲವನ್ನು ಕೊಡುವೆನು. ಅವರ ಮಾತಿನಲ್ಲಿ ಅಧಿಕಾರವನ್ನು, ಅವರ ಸ್ತುತಿಗಳಲ್ಲಿ ಬಲವನ್ನು ಉಂಟುಮಾಡುವೆನು ಎಂದನು. ಮತ್ತಷ್ಟು ನಾವು ಕಾದಿರುವಾಗ ಆತನು: ಚಿಕ್ಕಮಕ್ಕಳನ್ನು ಆಶೀರ್ವದಿಸಲು, ಅವರನ್ನು ಉಪಯೋಗಿಸಲು ನಾನು ಚಿಂತಿಸುವುದರಿಂದ, ದುಷ್ಟನಾದ ಸೈತಾನನು ಇಗೋ, ಚಿಕ್ಕಮಕ್ಕಳ ಮೇಲೆ ತನ್ನ ಕಣ್ಣುಗಳನ್ನು ಇಟ್ಟಿದ್ದಾನೆ. ಅವರನ್ನು ಕೆಡಿಸುವಂತೆ, ಅವರ ಹೃದಯಗಳನ್ನು ಹಾಳುಮಾಡಲು, ಅವರ ದೇಹವನ್ನು ನಾಶಮಾಡುವಂತೆ ತನ್ನ ದುಷ್ಟ ಕೈಗಳನ್ನು ವಿಸ್ತರಿಸಲು ಸಿದ್ಧವಾಗಿದ್ದಾನೆ. ನೀನು ಮುನ್ನಡೆ. ಅವರು ನನ್ನ ಬಳಿ ಬರುವದಕ್ಕೆ ನೀವು ಮಾರ್ಗ ಉಂಟುಮಾಡುವಾಗ, ನಾನು ಅವರನ್ನು ಅಭಿಷೇಗಿಸಿ, ಕೂಸುಗಳ ತುಟಿಗಳಿಂದ ಸೈತಾನನ್ನು ಮತ್ತು ಸ್ವಾಧೀನಪಡಿಸಿ ಕೊಳ್ಳುವಂತವರನ್ನು ನಾನು ಮುದ್ರಿಸುವೆನು ಎಂದನು. ಮತ್ತಷ್ಟು ಕರ್ತನು ನನ್ನೊಡನೆ ಮಾತನಾಡಿ: ಚಿಕ್ಕಮಕ್ಕಳನ್ನು ಗುರಿಯಿಟ್ಟು ಇನ್ನು ಬರಲಿರುವ ದಿನಗಳಲ್ಲಿ ಸೈತಾನನು ಕ್ರಿಯೆ ಮಾಡಲು ಪ್ರಾರಂಭಿಸುವನು. ಶಾಲೆಯ ಮಕ್ಕಳನ್ನು ದುಷ್ಟ ಮನುಷ್ಯರು ಅಪಹರಿಸುವುದನ್ನು ಹೆಚ್ಚಾಗಿ ಕೇಳುವಿರಿ. ಚಿಕ್ಕಮಕ್ಕಳ ಮೇಲೆ ಅತ್ಯಾಚಾರಗಳು ಮಾಡಲ್ಪಡುವುದು. ಕಾಣದಂತೆ ಮಾಯೆಯಾಗುವ ಮಕ್ಕಳ ಸಂಖ್ಯೆ ಹೆಚ್ಚಾಗುವುದು. ಅವರನ್ನು ಕುರಿತ ಸುದ್ದಿಗಳು ಸಿಕ್ಕದೆ ಹೋಗುವುದು. ಮಕ್ಕಳನ್ನು ನನ್ನ ಬಳಿಗೆ ಕರೆದುಕೊಂಡು ಬನ್ನಿರಿ. ಅವರುಗಳಿಗಾಗಿ ನನ್ನ ಮಹಿಮೆಯಾದ ಕಾರ್ಯಗಳನ್ನು ಇಟ್ಟಿದ್ದೇನೆ. ನಾನು ಅವರ ಜೊತೆಯಲ್ಲಿ ಸಹಜವಾಗಿ ಮಾತನಾಡಿ, ಅವರ ಕಣ್ಣುಗಳನ್ನು ತೆರೆಯುವೆನು. ಅವರು ನನ್ನ ಮಹಿಮೆಯನ್ನು ಕಾಣುವರು. ನೀವು ಅವರಿಗೆ ಬಾಗಿಲನ್ನು ತೆಗೆದು ಕೊಟ್ಟು ಅವರ ಮೇಲೆ ಗಮನವಿಡೀ ಎಂದು ಹೇಳಿದನು. (ಬಹಿರಂಗಪಡಿಸಿದ ದಿನ: ಡಿಸೆಂಬರ್ 2011 ನಲುಮವಾಡಿ)

## ವ್ಯಾಖ್ಯಾನ:

ಚಿಕ್ಕಮಕ್ಕಳ ಮೇಲೆ ಕರ್ತನು ದೊಡ್ಡದಾದ ಆಶೀರ್ವಾದಗಳನ್ನು ಇಟ್ಟಿದ್ದಾನೆ. ಅವರ ಮುಖಾಂತರ ಕೊನೆಯ ದಿನಗಳಲ್ಲಿ ಕರ್ತನು ಸೈತಾನನ ಅಧಿಕಾರಗಳನ್ನು ಒಡೆಯಲು ಮತ್ತು ಅವನ ಕ್ರಿಯೆಗಳನ್ನು ನಾಶಮಾಡುವ ಅಭಿಷೇಕವನ್ನು ಅವರಿಗೆ ನೀಡಲು ಯೋಜನೆಗಳನ್ನೂ ಇಟ್ಟಿದ್ದಾನೆ. ಆತ್ಮದ ಅನುಭವಗಳು ಮತ್ತು ಕರ್ತನು ಮಾತನಾಡಿ ಹೇಳುವ ಪ್ರವಾದನೆಗಳು ಅವರಿಗೆ ಕೊಡಲ್ಪಡುತ್ತದೆ. ಇದನ್ನು ತಿಳಿದ ಸೈತಾನನು ಈಗಾಗಲೇ ಮಕ್ಕಳಿಗೆ ವಿರುದ್ಧವಾದ ಕಾರ್ಯಗಳಲ್ಲಿ ಬೇಗನೆ ಇಳಿದು ಸಿದ್ಧ ಮಾಡುತ್ತಿದ್ದಾನೆ. ಕೆಲವು ದಿನಗಳಿಂದ ನಡೆದು ಬರುವ ಚಿಕ್ಕಮಕ್ಕಳ ಮೇಲೆ ಬಿಚ್ಚಲ್ಪಟ್ಟಿರುವ ಲೈಂಗಿಕ ನಿಂದನೆಗಳು, ಅಪಹರಣಗಳು, ಮಕ್ಕಳನ್ನು ಕೊಲೆಮಾಡುವ ಕಾರ್ಯಗಳು ಸೈತಾನನು ಮಕ್ಕಳಿಗೆ ವಿರುದ್ಧ ವೇಗವಾಗಿ ಕ್ರಿಯೇಮಾಡುವುದನ್ನು ತೋರ್ಪಡಿಸುತ್ತದೆ. ಸೈತಾನನ ಕ್ರಿಯೆಗಳು ಕಟ್ಟಲ್ಪಡುವಂತೆಯೂ, ಮಕ್ಕಳ ಮೇಲೆ ಕರ್ತನ ಚಿತ್ತ ಪೂರ್ಣವಾಗುವಂತೆ ನಾವು ಪ್ರಾರ್ಥಿಸುವಂತೆ ಕರೆಯಲ್ಪಟ್ಟಿದೆವೇ.

## ಪ್ರಾರ್ಥನೆಯ ಅರ್ಜಿಗಳು:

1. ಚಿಕ್ಕಮಕ್ಕಳ ಮೇಲೆ ಕರ್ತನು ಇಟ್ಟಿರುವ ದೊಡ್ಡ ಚಿತ್ತಗಳು ನೆರವೇರುವಂತೆ, ಅವರಿಗಾಗಿ ಬಹಿರಂಗವಾಗಿ ಇಟ್ಟಿರುವ ವರಗಳನ್ನು ಮತ್ತು ಅನುಭವಗಳನ್ನು ಅವರು ತಡೆಯಿಲ್ಲದೆ ಹೊಂದಿಕೊಳ್ಳುವಂತೆ ಪ್ರಾರ್ಥಿಸಿರಿ.
2. ಮಕ್ಕಳಿಗೆ ಕರ್ತನನ್ನು ಹುಡುಕ್ಕುವ ಸ್ಥಿತಿಯನ್ನು ರೂಪಿಸಿಕೊಡುವಂತೆ ಅವರನ್ನು ಹೆತ್ತವರಿಗಾಗಿ ಪ್ರಾರ್ಥಿಸಿರಿ. ಇಗ್ಗಿನ ದಿನಗಳಲ್ಲಿ ಹೆತ್ತವರು ಮಕ್ಕಳ ಶಿಕ್ಷಣವಂತ ಕಾರ್ಯಗಳಲ್ಲಿ ತೋರಿಸುವ ಕುತೂಹಲವನ್ನು ಕರ್ತನನ್ನು ಹುಡುಕ್ಕುವುದಲ್ಲಿ ತೋರ್ಪಡಿಸುವಂತೆ ತರಬೆತ್ತಿ ನೀಡುವುದಿಲ್ಲ.
3. ಚಿಕ್ಕಮಕ್ಕಳಿಗೆ ವಿರೋಧವಾಗಿ ಸೈತಾನನು ಮಾಡಲು ಚಿಂತಿಸಿರುವ ಭಯಂಕರವಾದ ಕಾರ್ಯಗಳು ಇಗಾಗಲೇ ವೇಗವಾಗಿ ದೇಶದಲ್ಲಿ ಹರಡಲು ಪ್ರಾರಂಭವಾಗಿದೆ. ಇವುಗಳು ಕಟ್ಟಲ್ಪಡುವಂತೆ ಪ್ರಾರ್ಥಿಸಿರಿ.
4. ಚಿಕ್ಕಮಕ್ಕಳನ್ನು ಅಪಹರಣಗಳು ಮಾಡುವುದು, ಅವರನ್ನು ಬಲಿಕೊಟ್ಟು ದುಃಖಪಡಿಸುವಂತಹ ಸ್ಥಿತಿಗಳು ಈಗಿನ ದಿನಗಳಲ್ಲಿ ಹೆಚ್ಚಾಗಿವೆ. ಇಂತಹ ಕಾರ್ಯಗಳು ಬದಲಾಗುವಂತೆ ಪ್ರಾರ್ಥಿಸಿರಿ. ಮಕ್ಕಳನ್ನು ಕುರಿಯಿಟ್ಟು ಸೈತಾನನ್ನು ಇಂಟರ್ನೆಟ್ ಲೋಕದಲ್ಲಿ ಮಾಡಿಕೊಂಡು ಬರುವ ಕಾರ್ಯಗಳು ತಡೆಯಾಗುವಂತೆ ಪ್ರಾರ್ಥಿಸಿರಿ.
5. ಚಿಕ್ಕಮಕ್ಕಳನ್ನು ಅಪಹರಣಗಳು ಮಾಡುವುದು, ಅವರನ್ನು ವೇಶ್ಯಾವಾಟಿಕೆಯಾ ಬಲವಂತ ಮಾಡುವಂತಹ ಗುಂಪುಗಳು ಹಿಡಿಯಲ್ಪಡುವಂತೆ ಪ್ರಾರ್ಥಿಸಿರಿ. ಅದೇ ರೀತಿಯಲ್ಲಿ ಓದುವ ಮಕ್ಕಳ ಮಧ್ಯದಲ್ಲಿಯೂ ವೇಗವಾಗಿ ಹರಡಿಬರುವ ಮಾದಕ ದ್ರವ್ಯಗಳ ಕಾರ್ಯಗಳು ಕೆಲವು ದಿನಗಳಿಂದ ಹೆಚ್ಚುತ್ತಲೇ ಬರುತಿದೆ. ಇವುಗಳೆಲ್ಲವೂ ಮಕ್ಕಳ ಮಾರ್ಗ ತಪ್ಪಿಸಲು ಸೈತಾನನು ಮಾಡುವ ತಂತ್ರವಾಗಿದೆ. ಇವುಗಳು ನಾಶವಾಗುವಂತೆ ಪ್ರಾರ್ಥಿಸಿರಿ.